# ಕನಸಿನಲ್ಲಿ ದೇವರು

■ ಮೂಲ: **ವಿಷ್ಣು ನಾಗರ್**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಎಸ್. ವಿ. ಹೂಗಾರ್



ದೇವರು ಖಂಡಿತ ಇದ್ದಾನೆ ಎಂಬ ವಿಷಯ ವಾಸ್ತವವಾಗಿಯೂ, ದುರದೃಷ್ಟದಿಂದ ಇಂದೇ ನನಗೆ ತಿಳಿಯಿತು. ತಡವಾಯಿತಲ್ಲ! ಇದುವರೆಗೆ ನಾನು ತಪ್ಪು ತಿಳಿವಳಿಕೆಯಲ್ಲಿದ್ದೆ. ಅದೇನಾಯಿತೆಂದರೆ, ನಿನ್ನೆ ರಾತ್ರಿ ದೇವರು ನನ್ನ ಕನಸಿನಲ್ಲಿ ಬಂದ. ಮನೆಯ ಬಾಗಿಲು ಒಮ್ಮೊಮ್ಮೆ ತೆರೆದಿರುತ್ತದಲ್ಲ, ಅಂತೆಯೇ ಕನಸಿನ ಬಾಗಿಲು ಸಹ ತೆರೆದಿತ್ತೇನೋ! ನಾನೂ ಮನುಷ್ಯನಲ್ವ, ತಪ್ಪು ಒಮ್ಮೊಮ್ಮೆ ನನ್ನಿಂದಲೂ ಆಗುತ್ತದೆ. ಹಾಗಂತ ಇದುವರೆಗೆ ಕನಸಿನಲ್ಲಿ ಕಾನೂನು ಬಾಹಿರವಾಗಿ ಮನಮೋಹನ್ ಸಿಂಗ್, ನರೇಂದ್ರ ಮೋದಿ ಅಥವಾ ಅವರಂತಹವರು ಪ್ರವೇಶ ಮಾಡುತ್ತಿದ್ದರು. ಈ ಬಗ್ಗೆ ನಾನೆಂದೂ ಆಕ್ಷೇಪಿಸಲಿಲ್ಲ. ದೇವರೂ ಇವರನ್ನು ಅನುಕರಣೆ ಮಾಡುತ್ತಾ, ನನ್ನ ಕನಸಿನಲ್ಲಿ ಬರುತ್ತಾನೆಂದು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ.

ಒಮ್ಮೆ ಏನಾಯಿತೆಂದರೆ, ಕನಸಿನಲ್ಲಿ ಆಗಿನ ಪ್ರಧಾನಮಂತ್ರಿಗಳಾದ ಮನಮೋಹನ್ ಸಿಂಗ್‌ರು ಬಂದರು. ಟೂ ಜಿ ಬಗ್ಗೆ ಪ್ರಸ್ತಾಪಿಸಲು ಅಲ್ಲ, ಅರ್ಥವ್ಯವಸ್ಥೆಯ ಬಗ್ಗೆ ನನ್ನೊಂದಿಗೆ ಸಲಹೆ ಕೇಳಲು ಬಂದರು. ಇದಕ್ಕೆ ನನ್ನಂಥ ಅಯೋಗ್ಯ ಅವರಿಗೆ ಸಿಗಬೇಕೆ ಎಂದು ನನಗೆ ಸಂಕೋಚವಾಯಿತು. ಆದರೆ ದೇಶದ ಪ್ರಧಾನಮಂತ್ರಿಗಳು ನನ್ನನ್ನು ಇದಕ್ಕೆ ಯೋಗ್ಯನೆಂದು ತಿಳಿದಾಗ ನನ್ನನ್ನು ನಾನು ಹೆಚ್ಚು ಹೊತ್ತು ಅಯೋಗ್ಯನೆಂದು ತಿಳಿಯುವುದು ಕಷ್ಟವಾಗುತ್ತದೆ.

ನಿಜ ಹೇಳಬೇಕೆಂದರೆ, ನನ್ನ ಮನೆಯ ಅರ್ಥವ್ಯವಸ್ಥೆಯನ್ನು ಹೆಂಡತಿ ನೋಡಿಕೊಳ್ಳುತ್ತಾಳೆ, ಹೀಗಾಗಿ ಅದು ನಡೀತಿದೆ. ಇಲ್ಲದಿದ್ದಲ್ಲಿ ನಾನೆಂದೋ

